ನೀವು ಅಲ್ಲಿರುವ ವಸ್ತುಗಳೆಲ್ಲವನ್ನು ವಿಕಾಸದ ಹೆಜ್ಜೆಗಳಾಗಿ ಗುರುತಿಸಿದ್ದೀರಾ?

ಮನುಷ್ಯನ ವಿಕಾಸವೆಂದರೆ ಐತಿಹಾಸಿಕ ಬೆಳವಣಿಗೆ ಮಾತ್ರವಲ್ಲ ಅಥವಾ ಜೀವವಿಕಾಸದ ಕಥೆಯೊಂದೇ ಅಲ್ಲ. ಅವನೊಂದಿಗೆ ಬೆಳೆದು ಬಂದ ಕಲೆಯ ವಿಕಾಸವೂ ಇತಿಹಾಸವೇ. ಅದಕ್ಕೆಂದೇ ನನ್ನ ಮುಂದಿನ ಭೇಟಿ ಆರ್ಟ್ ಗ್ಯಾಲರಿಯ ಕಡೆಗೆ. ಹಸಿವು, ನಿದ್ದೆ, ಮೈಥುನಗಳಂತೆಯೇ ಮನುಷ್ಯನನ್ನು ಸದಾ ಹಿಂಬಾಲಿಸಿದ್ದೆಂದರೆ ಅವನ ಕಲಾಪ್ರೀತಿ. ಇತಿಹಾಸ ಮನುಷ್ಯನ ಭೌತಿಕ ವಿಕಾಸದ ಕಥನವಾದರೆ ಕಲೆಯೆಂಬುದು ಅವನ ಕ್ರಿಯಾಶೀಲತೆಯ ಹೆಜ್ಜೆಗುರುತಾಗಿದೆ. ಅಲ್ಲಿರುವ ಎಲ್ಲ ಬಗೆಯ ಚಿತ್ರಗಳು, ಮೂರ್ತಿಗಳು, ಕ್ರಾಫ್ಟ್‌ಗಳನ್ನು ನೋಡುತ್ತಾ ಕಲೆಯ ವಿಕಾಸದ ಹಾದಿಯನ್ನು ದಾಖಲಿಸುತ್ತೇನೆ. ಒಂದು ಕಲಾಶಾಲೆಯ ಭೇಟಿಯಿಂದ ಮಾನವನ ಕಲೆಯ ವಿಕಾಸದ ದಾರಿಯನ್ನು ಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲವೆಂದು ನನಗೆ ಗೊತ್ತು. ಜತೆಯಲ್ಲಿ ಕಲೆಯನ್ನು ಆಸ್ವಾದಿಸಲು ನಮ್ಮ ಕಣ್ಣುಗಳಿಗೆ ತರಬೇತಿ ಬೇಕಾಗುತ್ತದೆ ಎಂಬ ಸತ್ಯವನ್ನೂ ನಾನು ಅರಿತಿದ್ದೇನೆ. ಕಲೆಯ ಆಸ್ವಾದನೆಯೆಂದರೆ ಆ ಕಾಲದ ಕಲಾಕಾರನೊಂದಿಗಿನ ಮಾತುಕತೆಯೂ ಹೌದು ಎಂಬುದನ್ನು ನಾವು ನೆನಪಿಡಬೇಕು. ದೃಷ್ಟಿಯನ್ನು ಹೊಂದಿರುವ ಅನೇಕರು ತಮ್ಮ ಕಣ್ಣುಗಳಿಗೆ ಯಾವುದೇ ಕಲಾ ಆಸ್ವಾದನೆಯ ತರಬೇತಿಗಳನ್ನು ನೀಡದಿರುವ ವಿಷಯ ನನ್ನನ್ನು ಸದಾ ಕಾಡುತ್ತದೆ.

ಕಲಾಶಾಲೆಯಿಂದ ಹೊರಬರಲು ನನ್ನ ಮನಸ್ಸು ಒಪ್ಪದೇ ಇರಬಹುದು. ಆದರೆ ನನಗಿರುವ ಸೀಮಿತ ಅವಧಿಯ ಬಗ್ಗೆ ನಾನದಕ್ಕೆ ತಿಳಿಹೇಳಬೇಕು. ಜಗತ್ತಿನ ಸೌಂದರ್ಯದ ಕೀಲಿ ಕೈಯ್ಯನ್ನು ಕ್ಷಣಮಾತ್ರದಲ್ಲಿ ತೆರೆದುಬಿಡುವ ಸಂಗತಿಗಳ ಬಗ್ಗೆ ಮಾತ್ರ ನನ್ನ ಗಮನವಿರಬೇಕು. ಹಾಗಾಗಿ ನನ್ನ ಮುಂದಿನ ಪಯಣ ರಂಗಮಂದಿರದ ಕಡೆಗಿರುತ್ತದೆ. ಇಲ್ಲಿ ರಂಗಪ್ರದರ್ಶನಗಳನ್ನು ನೋಡಲು ಅನೇಕ ಸಲ ಬಂದಿರುವೆ. ರಂಗದಲ್ಲಿ ನಡೆಯುವ ಕ್ರಿಯೆಗಳನ್ನೆಲ್ಲ ನನ್ನ ಸಂಗಾತಿಯೊಬ್ಬರು ನನ್ನ ಅಂಗೈ ಮೇಲೆ ಬರೆಯುವುದರ ಮೂಲಕ ಮಾತ್ರವೇ ನಾನು ನಾಟಕಗಳನ್ನು ಆಸ್ವಾದಿಸಿರುವೆ. ಇದೀಗ ಹಾಮ್ಲೆಟ್, ಎಲಿಜಬೆತ್ ಎಲ್ಲ ಪಾತ್ರಗಳನ್ನು ಜೀವಂತವಾಗಿ ರಂಗದ ಮೇಲೆ ನೋಡುವ ಒಂದೇ ಒಂದು ಅವಕಾಶ ನನಗೆ ದೊರೆತಿದೆ. ಹೌದು, ನಾನು ನೋಡಲು ಸಾಧ್ಯವಾಗುವುದು ಒಂದು ನಾಟಕವನ್ನು ಮಾತ್ರ. ಅದಕ್ಕಾಗಿ ನಾನು ನನ್ನ ಕಣ್ಣುಗಳಿಗೆ ಅದೆಷ್ಟು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನೆನಪಿಸಿಕೊಳ್ಳಿ, ನೀವೆಂದಾದರೂ ಒಂದು ಒಳ್ಳೆಯ ರಂಗಕೃತಿಯನ್ನು ಆಸ್ವಾದಿಸಿದ ಮೇಲೆ ನಿಮ್ಮ ಕಣ್ಣುಗಳಿಗೆ ಧನ್ಯವಾದಗಳನ್ನು ಹೇಳಿದ್ದೀರಾ?

ನನಗೆ ರಂಗದ ಮೇಲಿರುವ ನಟರ ಶ್ರುತಿಬದ್ಧವಾದ ನಡಿಗೆಯನ್ನಾಗಲೀ, ಮಾತುಗಳನ್ನಾಗಲೀ ಗ್ರಹಿಸಲು ಸಾಧ್ಯವಿಲ್ಲ. ಒಮ್ಮೆ ನನ್ನ ರಂಗಸ್ನೇಹಿತನೊಬ್ಬ ಅವನ

ರಂಗನಡೆಯನ್ನು ಮತ್ತು ನಾಟಕದ ಮಾತುಗಳನ್ನು ಅವನನ್ನು ಮುಟ್ಟುವುದರ ಮೂಲಕ ಗ್ರಹಿಸಿಕೊಳ್ಳಲು ನನಗೆ ಅವಕಾಶ ನೀಡಿದ್ದ. ಆ ದಿನ ನಾನು ಅದೆಷ್ಟು ಖುಷಿಯಾಗಿದ್ದೆ! ಇಂದು ಇಡಿಯ ನಾಟಕವನ್ನು ದೃಶ್ಯವಾಗಿ ಕಣ್ತುಂಬಿಕೊಂಡ ಮೇಲೆ ಇಡಿಯ ರಾತ್ರಿ ಅದೇ ಕನವರಿಕೆಯಲ್ಲಿಯೇ ಕಳೆದೀತು ಅಷ್ಟೆ.

ಮೂರನೆಯ ದಿನ ಕೂಡ ನಾನು ಸೂರ್ಯೋದಯವನ್ನು ತಪ್ಪಿಸಿಕೊಳ್ಳಲಾರೆ. ಏಕೆಂದರೆ ಪ್ರತಿ ಬೆಳಗಿನ ಸೌಂದರ್ಯವೂ ಬೇರೆ ಬೇರೆಯೇ. ಇದು ನಾನು ಜಗತ್ತನ್ನು ನೋಡಬಲ್ಲ ಕೊನೆಯ ದಿನವಾದ್ದರಿಂದ ಒಂದು ಕ್ಷಣವನ್ನೂ ನಾನು ವ್ಯರ್ಥ ಮಾಡಲಾರೆ. ಮೊದಲನೆಯ ದಿನ ಸ್ನೇಹಿತರು, ಮನೆ, ಪುಸ್ತಕಗಳಿಗೆ ಮೀಸಲಾಗಿದ್ದರೆ, ಎರಡನೆಯ ದಿನವನ್ನು